ಅಂದುಕೊಂಡದ್ದಕ್ಕೆ ಇಲ್ಲೊಂದು ಸಾಕ್ಷಿಯನ್ನು ಒದಗಿಸಿಬಿಡುತ್ತಾನೆ.

ಪುರುಷರು ತಾವು ನಿರ್ಮಿಸಿದ ಧರ್ಮ ದೊಡ್ಡದೋ ಅಥವ ಸಮಯಾ ಸಂದರ್ಭಗಳಲ್ಲಿ ಅದನ್ನು ದಾಟಿ ಮಾನವೀಯತೆಯನ್ನು ಎತ್ತಿ ಹಿಡಿಯುವುದು ದೊಡ್ಡದೋ ಎಂದು ಕೇಳುತ್ತಾ, ಕಡೆಗೆ ಕವಿ ಅರಣ್ಯ ಪರ್ವದ ದೂರ್ವಾಸಾತಿಥ್ಯದಲ್ಲಿ ಮತ್ತು ಉದ್ಯೋಗ ಪರ್ವದಲ್ಲಿ ಕೃಷ್ಣನೆದುರು ನಡೆಯುವ ಸಂಧಿ ವಿಚಾರದಲ್ಲಿ ಸ್ತ್ರೀ ಪುರುಷ ಸಂಬಂಧದ ಆಧಿಕ್ಯದ ತುದಿ ಮುಟ್ಟಿಸಿಬಿಡುತ್ತಾನೆ. ಈ ಕ್ರಮದಲ್ಲಿ ಪಂಪನಿಗಿಂತಲೂ ಕುಮಾರವ್ಯಾಸನು ದ್ರೌಪದಿಯ ಪಾತ್ರಚಿತ್ರವನ್ನು ಅವಳ ಸ್ವಯಂವರದಲ್ಲಿ ನಿರ್ಮಿಸಿ, ಬೆಳೆಸಿ ಔನತ್ಯಕ್ಕೇರಿಸಿರುವ ಕ್ರಮ ಅನನ್ಯ. ಆದರೆ ವ್ಯಾಸ ಮಹಾಭಾರತದಲ್ಲಿ ಈ ಪ್ರಸಂಗ ಕುಮಾರವ್ಯಾಸನಿಗಿಂತ ಹೆಚ್ಚು ವಾಸ್ತವವಾದಿ ಮತ್ತು ಮನುಷ್ಯ ಸಂಬಂಧಿ ಚರ್ಚೆಯ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುತ್ತದೆ.

ಭೀಷ್ಮ, ಧೃತರಾಷ್ಟ್ರ, ವಿಕರ್ಣ, ಶಕುನಿ, ಭೀಮ, ದುರ್ಯೋಧನ ಇವರೆಲ್ಲರ ನಡುವೆ ದೀರ್ಘ ಚರ್ಚೆ ನಡೆಯುತ್ತದೆ. ಈ ಚರ್ಚೆಯ ಸಾರಾಂಶವೆಂಬಂತೆ ಭೀಷ್ಮನು ದ್ರೌಪದಿಗೆ ಹೇಳುವ ಮಾತು ವ್ಯಾಸಭಾರತದಲ್ಲಿ ಹೀಗಿದೆ: 'ಲೋಕದಲ್ಲಿ ಬಲಿಷ್ಠನಾದವನು ಯಾವುದನ್ನು ಧರ್ಮವೆಂದು ತಿಳಿಯುತ್ತಾನೋ ಅದೇ ಧರ್ಮವಾಗಿ ನಿಲ್ಲುತ್ತದೆ. ನಿನ್ನ ಈ ಪ್ರಶ್ನೆ ಬಹಳ ಸೂಕ್ಷ್ಮವಾದದ್ದು, ಗಹನವಾದದ್ದು, ಮಹತ್ತ್ವವುಳ್ಳದ್ದು. ಅದರಿಂದ ಇದನ್ನು ನಾನು ನನ್ನ ವಿಚಾರದಿಂದ ನಿರ್ಧರಿಸಲಾರೆ. ಒಂದು ಸಂಗತಿಯೇನೋ ನಿಶ್ಚಯ; ಈ ಕುಲಕ್ಕೆ ಕೊನೆಗಾಲ ಬಂದಿದೆ. ಅದಕ್ಕೆ ಕೌರವರು ಹೀಗೆ ಲೋಭ, ಮೋಹಗಳಿಗೆ ವಶರಾಗಿದ್ದಾರೆ...' ಎನ್ನುತ್ತಾನೆ. ವ್ಯಾಸರು ಇಲ್ಲಿ ಕೃಷ್ಣನ ಪ್ರವೇಶವನ್ನೇ ತರುವುದಿಲ್ಲ. ಈ ಹಿನ್ನೆಲೆಯಲ್ಲಿ ಕುಮಾರವ್ಯಾಸನ ಪವಾಡ ಸಂಗತಿಗಿಂತ ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗದ ಚರ್ಚೆ ಹೆಚ್ಚು ಮಾನವೀಯ ನೆಲೆಯಲ್ಲೇ ಪ್ರವಾಹಿಸುತ್ತದೆ. ಇದು ವ್ಯಾಸನ ಮೂಲಸೃಷ್ಟಿಯ ಕಥನಕ್ರಮ ಮತ್ತು ಸರ್ವಶ್ರೇಷ್ಠ ಕೃತಿಯ ಘನತೆಯಷ್ಟೇ.

ಪಂಪಭಾರತದಲ್ಲಿಯೂ ಕಾಣದ ಈ ಸ್ತ್ರೀ ಪುರುಷ ಆತ್ಮಸಂಬಂಧವನ್ನು ಕುಮಾರವ್ಯಾಸ ಅಪೂರ್ವ ರೀತಿಯಲ್ಲಿ ಮೇಲೆ ಕಂಡಂತೆ ಆರಂಭಿಸಿ ಅದನ್ನು ಕಾವ್ಯದುದ್ದಕ್ಕೂ ಬೆಳೆಸಿಕೊಂಡು ಹೋಗುತ್ತಾನೆ. ಕೃಷ್ಣ, ದ್ರೌಪದಿಯನ್ನು ಅವಳ ಸಂಕಟದ ಸಮಯದಲ್ಲಿ ಸಮಾಧಾನಪಡಿಸುತ್ತಾ... 'ಏಳೌ ತಾಯೆ ಸರೋಜಮುಖಿ ಪಾಂಚಾಲೆ ನೊಂದೌ ತಂಗಿಯೆನುತ...' ಎಂಬ ಈ ವಾಕ್ಯದಲ್ಲಿ ತಾಯಿ, ತಂಗಿ ಎಂಬ ಎರಡೂ ಪದಗಳನ್ನು ಒಮ್ಮೆಗೇ ಬಳಸುತ್ತಾನೆ. ಇದು ಕುಮಾರವ್ಯಾಸನು, ಸ್ತ್ರೀ ಪುರುಷರ ನಡುವೆ ಸೃಷ್ಟಿಸಿರುವ ಜಗತ್ತಿನ ಸಾಹಿತ್ಯದಲ್ಲಿ ವಿರಳವೆನಿಸಿರುವ ಲೋಕೋತ್ತರ ಸಂಬಂಧದ ಮಾದರಿ.

★★★

ಕುಮಾರವ್ಯಾಸನ ಗ್ರಾಮ ಮೂಲ ಮನೆತನದ ವಿವರಗಳನ್ನು ನೋಡುವಲ್ಲಿ ಆತನಿಗೆ ಅರಮನೆಯ ಸಂಬಂಧವಿದ್ದಂತೆ ತೋರುವುದು. ಕವಿಯ ಮೊಮ್ಮಗನ ಹೆಸರು ಕೋಳಿವಾಡದ ಶಾಸನದಲ್ಲಿ ಆನೆಯ ದೇವಪ್ಪಯ್ಯ ಎಂದಿದೆ. ಕಾವ್ಯ ವಿವರಗಳನ್ನು ಗಮನಿಸಿದರೆ, ಆತನಿಗೆ ಅರಮನೆಯ ಮೂಲೆಮೂಲೆಯೂ ಪರಿಚಯವಿದ್ದಂತಿದೆ. ಯೋಗಿಯಾದವನು ಅರಮನೆಯ ನಿವಾಸಿಯಾಗಿರುವುದು ಸಾಧ್ಯವಿಲ್ಲ. ಅಷ್ಟಲ್ಲದೆ ಕುಮಾರವ್ಯಾಸನ ಪದ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವನಿಗೆ ಅರಮನೆಯ ವ್ಯವಹಾರಗಳ ಬಗ್ಗೆ, ಪುರೋಹಿತ ಶಾಹಿಯ ಹುಸಿ ಆಚರಣೆ, ವ್ರತಗಳ ಬಗ್ಗೆ ಗೌರವ, ನಂಬಿಕೆ ಇದ್ದಂತೆ ತೋರುವುದಿಲ್ಲ. ಕವಿಗೆ ಅರಮನೆಯ ಸಂಬಂಧ ಇದ್ದಿತು ಎಂದಾಕ್ಷಣ ಅವನು ಕೋಳಿವಾಡದಂಥ ಗ್ರಾಮಗಳ ನಿತ್ಯ ಜೀವನ ಅನುಭವದಿಂದ ದೂರವಿದ್ದ ಎಂದು ಹೇಳಲು ಬರುವುದಿಲ್ಲ. ಗದುಗು ಸುತ್ತಿನ ಗ್ರಾಮ್ಯ ಭಾಷೆ ಅವನ ಕಾವ್ಯದಲ್ಲಿ ಉಸಿರಾಡುವಂತೆ ಬಳಕೆಯಾಗಿದೆ.